# ಕಾನನ

JUNE 2012

ನಿಸರ್ಗದೆಡೆಗೆ ಪಯಣ



WILDLIFE CONSERVATION GROUP

© WCG

JUNE 2012

# ಕಾನನ

## ನಿಸರ್ಗದೆಡೆಗೆ ಪಯಣ



### ಲೇಖನಗಳು


* ಹಕ್ಕಿಲೋಕ - ಅಶ್ವಥ.ಕೆ.ಎನ್
* ಗೋಸುಂಬೆ -ಮಹದೇವ.ಕೆ.ಸಿ
* ವಿದ್ಯಾರ್ಥಿಗಾಗಿ ವಿಜ್ಞಾನ - ಮುರಳಿ.ಎಸ್
* ಸಂಜೆ ಹೊತ್ತು - ಕೃಷ್ಣನಾಯಕ್


ಅನಿಸಿಕೆ

E-mail: kaanana.mag@gmail.com

ಮುಖಪುಟ: ಗೋಸುಂಬೆ

© WCG

# ಸಂಪಾದಕೀಯ

ಮಾನವನ ದೆಸೆಯಿಂದ ಹೆಚ್ಚುತ್ತಿರುವ ಗ್ರೀನ್ ಹೌಸ್ ಅನಿಲಗಳಿಂದ ಭೂಮಿಯ ತಾಪ, ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಏಳು ಬಿಲಿಯನನ್ನು ಮೀರಿದ ಜನಸಂಖ್ಯೆಯಿಂದ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಒತ್ತಡ ಹೆಚ್ಚುತ್ತಿದೆ. ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರ ವಸತಿ, ಬಟ್ಟೆ, ವಿದ್ಯುತ್, ಔಷದೋಪಚಾರಕ್ಕಾಗಿ, ಅಳಿದ ಉಳಿದ ಕಾಡುಗಳನ್ನು ಕಡಿದು ನಾಶಮಾಡುತ್ತಿದ್ದೇವೆ.

ವಿಶ್ವದ ತಾಪ ಕೇವಲ ಎರಡು-ಮೂರು ಡಿಗ್ರಿ ಸೇಲ್ಸಿಯಸ್ ನಷ್ಟು ಹೆಚ್ಚಾದರು ದ್ರುವಗಳಲ್ಲಿನ ಹಿಮಕರಗಿ ಸಮುದ್ರ ಮಟ್ಟ ಹೆಚ್ಚುತ್ತದೆ. ಅತಿಸೂಕ್ಷ್ಮವಾದ ಭೂಮಿಯ ಹವಾಮಾನ ಹೆಚ್ಚುತ್ತಿರುವ ತಾಪಕ್ಕೆ ಬಹುಬೇಗ ಬದಲಾವಣೆಗೊಂಡು ಮಾರುತಗಳ ಪಥ ಬದಲುಗೊಂಡು, ಮಳೆಯಾಗುವ ಕ್ರಿಯೆ ಪಲ್ಲಟಗೊಳ್ಳುತ್ತದೆ. ಎಂದು ವಿಜ್ಞಾನಿಗಳು ಬಾಯಿ ಬಡಿದುಕೊಳ್ಳುತ್ತಿದ್ದರೂ, ಅದು ನಮಗೆ ಕೇಳಿಸುತ್ತಿಲ್ಲ.

ಮಾನವನ ಇಚ್ಛಾಶಕ್ತಿ ಬಹುದೊಡ್ಡದು, ಅವನು ಮನಸ್ಸುಮಾಡಿದರೆ ಎಲ್ಲವು ಸಾಧ್ಯ. ಈಗಲು ಹದಗೆಡುತ್ತಿರುವ ನಮ್ಮ ಭೂಮಿಯ ಆರೋಗ್ಯವನ್ನು ಸರಿಪಡಿಸುವುದು ನಮ್ಮ ಕೈಯಲ್ಲೇ ಇದೆ. ಎಚ್ಚೆತ್ತುಕೊಳ್ಳದಿದ್ದರೆ ಇದ್ದೇ ಇದೆ ವಿನಾಶ! ಮಾನವನು ಸರ್ವನಾಶವಾದರು ಭೂಮಿಗೇನು ನಷ್ಟವಿಲ್ಲ, ನಷ್ಟವೆಲ್ಲ ನಮಗೆ.

ಚಿಕ್ಕಂದಿನಲ್ಲಿದ್ದಾಗ ಅಜ್ಜ ಹೇಳಿದ ಕಾಡಿನ ಕಥೆಗಳ ಜೊತೆಯಲ್ಲಿಯೇ ಹಲವಾರು ಪಕ್ಷಿಗಳ ಲೋಕವನ್ನು ತೆರೆದಿಟ್ಟ ಅಜ್ಜನ ನೆನಪನ್ನು ಸ್ಮರಿಸಿಕೊಂಡಿದ್ದಾರೆ ಅಶ್ವಥ.ಕೆ.ಎನ್ ರವರು. ಜೊತೆಯಲ್ಲಿ ಈ ಸಾರಿ ಹಕ್ಕಿಲೋಕದಲ್ಲಿ ಟಿಟ್ಟಿಭ (ಉತ್ತುತ್ತಿ) ಪಕ್ಷಿಗಳ ಬಗ್ಗೆ ನಿಮ್ಮ ಜೊತೆ ಹಂಚಿಕೊಂಡಿದ್ದಾರೆ.

ಗೋಸುಂಬೆಗಳ ಜೀವನ ಕ್ರಮ,ಆವಾಸ, ಸಂತಾನೋತ್ಪತಿ, ಅವುಗಳು ಬದಲಿಸುವ ಬಣ್ಣಗಳ ಚಿತ್ರಣವನ್ನು ವೈಜ್ಞಾನಿಕವಾಗಿ ಮಹದೇವ.ಕೆ.ಸಿ ರವರು ಹಂಚಿಕೊಂಡಿದ್ದಾರೆ. ಜೊತೆಯಲ್ಲಿ ಸುಮಾರು 31800 ವರ್ಷ ಹಿಂದಿನ ಬೀಜ ಸೈಬೀರಿಯಾದ ಹಿಮದಲ್ಲಿ ದೂರೆತಿದ್ದು, ಅದನ್ನು ವಿಜ್ಞಾನಿಗಳು ಇತ್ತಿಚ್ಚಿಗೆ ಲ್ಯಾಬ್ ನಲ್ಲಿ ನೆಟ್ಟು ಸಸ್ಯವನ್ನು ಬೆಳೆಸುವಲ್ಲಿ ಸಫಲರಾಗಿದ್ದಾರೆ. ಎಂಬ ವೈಜ್ಞಾನಿಕ ಲೇಖನವನ್ನು ಶ್ರೀ ಮುರಳಿ.ಎಸ್ ರವರು ವಿಧ್ಯಾರ್ಥಿಗಳಿಗಾಗಿ ಬರೆದಿದ್ದಾರೆ.

ಅರಣ್ಯ, ವನ್ಯಜೀವಿ, ಪರಿಸರ ಸಂರಕ್ಷಣೆ, ವಿಜ್ಞಾನ, ವನ್ಯಜೀವಿ ಛಾಯಾಚಿತ್ರ, ಕವನ, ಕಥೆಗಳು ಹಾಗೂ ಲೇಖನಗಳನ್ನು ತಾವೂ ಕಾನನಕ್ಕೆ ಬರೆಯಬಹುದು.

ಇ-ಮೇಲ್ ವಿಳಾಸ : kaanana.mag@gmail.com

**Wildlife Conservation Group**

© WCG



# ಹಕ್ಕಿ ಲೋಕ

- **ಕೆಂಪು ಟಿಟ್ಟಿಭ**

ವೈಜ್ಞಾನಿಕ ಹೆಸರು: ***Vanellus indicus***

ಇಂಗ್ಲೀಷ್ ಹೆಸರು: **Red-Wattled Lapwing**

ನಾವು ಚಿಕ್ಕಂದಿನಲ್ಲಿದ್ದಾಗ ನಮ್ಮ ಅಜ್ಜ ನಮ್ಗೆ ಕಾಡಿನ ಕಥೆಗಳನ್ನು ಹೇಳುತ್ತಿದ್ದ, ಆ ಕಥೆಗಳು ನಮ್ಮನ್ನು ಬೇರೆಯ ಲೋಕಕ್ಕೆ ಕರೆದುಕೊಂಡ ಹೋಗುತ್ತಿದ್ದವು. ಆ ಸಣ್ಣ ವಯಸ್ಸಿನಲ್ಲಿ ನಮಗೆ ಪ್ರತಿಯೊಂದು ಕಥೆಗಳೂ ಕೂಡ ದೊಡ್ಡ ವಿಸ್ಮಯವಾಗಿ ಕಾಣುತ್ತಿದ್ದವು, ಆಗ ಮುಸ್ಸಂಜೆ ಮುಗಿದು ಕಗ್ಗತ್ತಲಾಗಿ ಮರ-ಪೊದೆಗಳೆಲ್ಲ ದೊಡ್ಡ ದೊಡ್ಡ ಭೂತಗಳಂತೆ, ರಾಕ್ಷಸರಂತೆ, ಆನೆಗಳಂತೆ ವಿಚಿತ್ರವಾಗಿ ಕಾಣುತ್ತಿದ್ದವು, ಆ ರಾತ್ರಿಯಲ್ಲಿ ಗಾಳಿಗೆ ಮರಗಳು ಅಲುಗಾಡಿದ ಶಬ್ಧ ಬಿಟ್ಟರೆ ಬೇರೆನು ಕೇಳುತ್ತಿರಲಿಲ್ಲ. ಬರೀ ಎಲೆಗಳು ಬೂಸ್ಸೋ. . . . ಎನ್ನುವ ಶಬ್ಧಮಾತ್ರ ಅಗಾಗ ಗುಮ್ಮಗಳು *ಗುಗೂ ಗೂ ಗೂ. . . .* ಎಂದು ಗುಮ್ಮಿಕ್ಕಿ ನಮಗೆ ಭಯ ಪಡಿಸುತ್ತಿದ್ದವು, ಮನೆಯ ಪಕ್ಕದಲ್ಲೇ ನರಿಗಳು ಊಳಿಡುತ್ತಿದ್ದವು, ದೂರದಲ್ಲೆಲ್ಲೋ ಆನೆಗಳ ಗೀಳಿಟ್ಟ ಶಬ್ಧ ಅಲೆ ಅಲೆಯಾಗಿ ಮೆಲ್ಲನೆ ಕೇಳುತ್ತಿತ್ತು.




ಎಲ್ಲೋ ದೂರದಲ್ಲಿ ಉತ್ತುತ್ತಿಗಳು

*ಟಿಟಿಟ್ಯೂ. . . .*

*ಟಿಟಿಟ್ಯೂ. . . .*

*ಟಿಟಿಟ್ಯೂ. . . .* ಎಂದು ಕಿರುಚುತ್ತಿದವು.

ಇದನ್ನು ಆಲಿಸಿದ ಅಜ್ಜ, ಆ ಕುರುಚಲು ಬಯಲಿನ ಕಡೆ ಯಾವುದೋ ಕಾಡು ಹಂದಿಯೋ, ತೋಳಗಳೋ ತಾರಾಡುತ್ತಿವೆ, ಅದಕ್ಕೆ ಹಕ್ಕಿಗಳು ಕಿರುಚುತ್ತಿವೆ ಎಂದು ವಿವರಿಸುತ್ತಿದ್ದ. ನಾನು ಅಜ್ಜನಿಗೆ "ಯಾಕೆ ಈ ರೀತಿ ಕಿರುಚುತ್ತಿವೆ ಆ ಹಕ್ಕಿಗಳು? ಎಂದು ಕೇಳುತ್ತಿದ್ದೆ. ಅಜ್ಜ ಅದಕ್ಕೆ ಪ್ರಾಣಿಗಳ ಬರುವಿಕೆಯನ್ನು ಇತರ ಪ್ರಾಣಿಗಳಿಗೆ ತಿಳಿಸಲು ಈ ರೀತಿಯ ಉಪಾಯ ಅವುಗಳದ್ದು ಎಂದು. ಕೆಲವು ಬಾರಿ ಉತ್ತುತ್ತಿಯು ನೆಲದ ಮೇಲೆ ಸಣ್ಣ ಕಲ್ಲುಗಳ ಮಧ್ಯೆ ಇಡುತ್ತಿದ್ದ ಮೊಟ್ಟೆ-ಮರಿಗಳನ್ನು ತಿನ್ನಲು ಬರುವ ಹಂದಿ-ನರಿ ತೋಳಗಳನ್ನು ಓಡಿಸುತ್ತಿರುವ ಕಿರುಚಾಟ ಇದು ಎಂದು ಹೇಳುತ್ತಿದ್ದ ಅಜ್ಜ.




ರಾತ್ರಿಯಲ್ಲಿ ಅಜ್ಜ ಹೇಳುವ ಈ ಕತೆಗಳಿಗೆ, ರಾತ್ರಿಯೆಲ್ಲ ಅದೇ ಗುಂಗಿನಲ್ಲಿ ಕನಸ್ಸಿನಲ್ಲಿ ನಮ್ಮದೇ ರೀತಿಯಲ್ಲಿ ಕತೆಗಳನ್ನು ಕಟ್ಟುತ್ತಿದ್ದೆವು. ಹಂದಿಗಳ ಗುಂಪು ಮನೆಯ ಪಕ್ಕದಲ್ಲಿನ ಕಾಡಿನ ದಾರಿಯಲ್ಲಿ ಮಣ್ಣಿನಿಂದ ಗೆಡ್ಡೆ ಗೆಣಸು, ಹುಲ್ಲು ಬೇರುಗಳನ್ನು ಅಗೆಯುತ್ತಿರಬೇಕಾದರೆ ಉತ್ತುತ್ತಿಗಳು ಅವುಗಳನ್ನು ಅಟ್ಟಾಡಿಸುವುದು. ನರಿ-ತೋಳಗಳು ಸತ್ತ ಪ್ರಾಣಿಯ ಮೂಳೆಗಳನ್ನು ತಿನ್ನುತ್ತಾ ಕಾಡಲ್ಲಿ ಅಲೆಯುವುದು. ಉತ್ತುತ್ತಿ ಹಕ್ಕಿಯ ಮೊಟ್ಟೆ ಮರಿಗಳನ್ನು ಹುಡುಕುತ್ತಾ ಸಿಕ್ಕ ಸಿಕ್ಕ ಮರಿ ಮೊಟ್ಟೆಗಳನ್ನು ಭಕ್ಷಿಸುವುದು. ಉತ್ತುತಿಗಳು ಅವುಗಳನ್ನು ಅಟ್ಟುವುದು, ಈ ರೀತಿಯಾಗಿ ಕಣ್ಮುಂದೆ ಚಿತ್ರಗಳು, ಕನಸುಗಳು ಮೂಡುತ್ತಿದ್ದವು. ನಾವು ನೋಡಿರದ ಆ ಉತ್ತುತ್ತಿ ಹಕ್ಕಿ ಯಾವುದು? ಎಂಬ ಅಕ್ಕನ ಪ್ರಶ್ನೆಗೆ ಅಜ್ಜ ಹಕ್ಕಿಯ ಪರಿಚಯವನ್ನು ಹೇಳುತ್ತಿದ್ದ. ಆ ಚಿಕ್ಕ ವಯಸ್ಸಿನಲ್ಲಿ ನಮಗೆ ಆ ಹಕ್ಕಿಗಳ ಲೋಕ ಯಾರಿಗೆ ತಾನೆ ಗೊತ್ತು! ಆದರು ಅಜ್ಜ ಅದೇ ಆ ದಿನ ನಮ್ಮ ಹೊಲದ ಬಳಿಯ ಬಂಡೆಯ ಮೇಲೆ ಸಣ್ಣ ಸಣ್ಣ ಕಲ್ಲಿನಂತೆ ಕಲ್ಲುಗಳ ಜೊತೆಯಲ್ಲಿ ನಾಲ್ಕು ಮೊಟ್ಟೆ ಇಟ್ಟಿತ್ತಲ್ಲಾ ಅದೇ ಆ ಹಕ್ಕಿ ಕಿರುಚುತ್ತಿರುವುದು ಎಂದು ಪರಿಚಯಿಸುತ್ತಿದ್ದ, ಅದು ಯಾವುದು ಎಂದು ತಲೆಕೆರೆದುಕೊಳ್ಳುತ್ತಿದ್ದಳು ಅಕ್ಕ.

ಅದೇ ನಮ್ಮ ಕಂದು ಕೋಳಿ ಹುಂಜ ಕಡತನು ಇದೆಯಲ್ಲಾ ಅದೇ ಗಾತ್ರ, ತಲೆ ಕತ್ತು ಎದೆ ಮೇಲೆ ಎಲ್ಲಾ ಕಪ್ಪಾಗಿರ್ತದೆ, ಆ ಮೇಲೆ ಕಣ್ಣತ್ರ, ಕೊಕ್ಕು ಎಲ್ಲಾ ಕೆಂಪಾಗಿರುತ್ತದೆ, ಹೊಟ್ಟೆ, ಬಾಲದ ತಳದಾಗ ಬಿಳಿ ಬಣ್ಣ. ಕಾಲುಗಳು ಸಣ್ಣಗೆ ಉದ್ದುಕೆ ಇರುತ್ತಲ್ಲಾ ಕಾಲ್ ಬೈರಪ್ಪನ ತರ ಎಂದು ನೆನಪು ಮಾಡಿಸುತ್ತಿದ್ದ. ನೆನಪು ಬಾರದೆ ಹೋದಲ್ಲಿ ಬೇರೆ ಯಾವುದೊ ಕತೆ ಹೇಳಿ ಮಲಗಿಸುತ್ತಿದ್ದ ಅಜ್ಜ. ನನ್ನ ಆ ಅಜ್ಜ ಕಾಡಿನ ಪ್ರಾಣಿ-ಪಕ್ಷಿಗಳ ಸಾವಿರಾರು ಕತೆಗಳಿಗೆ ಜೀವ ತುಂಬಿಸಿದ್ದಾನೆ.





ಬರಿ ಕತೆಗಳೇ ಅಲ್ಲ ಹೊಲ ಅಥವಾ ಕಾಡಿನ ಕಡೆ ಹೋದಾಗ ಸಿಗುವ ಪ್ರಾಣಿ-ಪಕ್ಷಿಗಳು ಕಂಡರೆ, ಅವುಗಳ ವರ್ತನೆ, ಬದುಕು, ಎಲ್ಲವನ್ನು ಪರಿಚಯಿಸಿ ಎಂದೋ ಹೇಳಿದ ಕಥೆಗೆ ಲಿಂಕ್ ಮಾಡಿ ಅದೇ ಹಕ್ಕಿ ಇದು ಎಂದು ಹೇಳುತ್ತಿದ್ದ.




ಒಂದು ದಿನ ಹೊಲದ ದಿಬ್ಬದ ಮೇಲೆ ನೆಲವನ್ನು ಕೆದರಿ ಕಲ್ಲುಗಳ ಮಧ್ಯದಲ್ಲಿದ್ದ ಮೊಟ್ಟೆಗಳನ್ನು ತೋರಿಸಿ “ನೋಡು ಈ ರೀತಿ ಹೊಲಗಳ ಬಳಿ, ಕೆರೆಗಳ ಅಕ್ಕಪಕ್ಕ, ಹುಲ್ಲು ಮೈದಾನ ಕೊಳಗಳ ದಂಡೆಗಳ ಬಳಿ ಸಾಮಾನ್ಯವಾಗಿ ಯಾವಾಗಲೂ ಹಕ್ಕಿ ಗೂಡುಗಳನ್ನು ನೋಡಬಹುದು ಎಂದು ಹಕ್ಕಿಯ ಆವಾಸವನ್ನು ಪರಿಚಯಿಸುತ್ತಿದ್ದ ನನ್ನಜ್ಜ.

ಉತ್ತುತ್ತಿಗಳು ಮಾರ್ಚ್–ಆಗಸ್ಟ್ ತಿಂಗಳಲ್ಲಿ ಕಂದು ಚುಕ್ಕೆಗಳಿರುವ ಮೂರು–ನಾಲ್ಕು ಬೂದು ಮಿಶ್ರಿತ ಕಂದು ಮೊಟ್ಟೆಗಳಿಟ್ಟು ಸಂತಾನೋತ್ಪತ್ತಿ ನಡೆಸುತ್ತವೆ. ಈ ಹಕ್ಕಿಯ ವಿಶೇಷತೆ ಎಂದರೆ ಸ್ವಲ್ಪ ಏನಾದರು ತೊಂದರೆಯಾದರೆ ಜೋರಾಗಿ ಕೂಗಾಡುತ್ತಾ ಗಲಾಟೆಮಾಡಿ ಉಳಿದ ಎಲ್ಲಾ ಹಕ್ಕಿಗಳಿಗೂ ಅಪಾಯದ ಮುನ್ಸೂಚನೆಯನ್ನು ಕೊಟ್ಟು ಕಿರುಚುತ್ತಾ ಹಾರಾಡುತ್ತವೆ.





# ಗೋಸುಂಬೆ

ಒಮ್ಮೆ ನಮ್ಮ ಶಾಲೆಯ ದಾರಿಯಲ್ಲಿ ಸುಮಾರು ಮಕ್ಕಳ ಗುಂಪು ಏನನ್ನೋ ನೋಡುತ್ತಿತ್ತು. ಏನ್ರೋ ಅದು? ಎಂದು ಕೇಳುತ್ತಾ ನಾನು ಆ ಗುಂಪಿಗೆ ಸೇರಿಕೊಂಡೆ. ಅಲ್ಲೊಬ್ಬ “ಅಣ್ಣ ನೋಡಣ್ಣ ಅದು ರೋಬೋಟ್ ತರ ನಡಿತಾಯಿದೆ” ಎಂದ ಇನ್ನೊಬ್ಬ ಅಣ್ಣಾ ಅದರ ಕಲರ್ ನೋಡಣ್ಣ. ಬಾಲ ಚಕ್ಕಲಿ ತರ ಇದೆ! ಎಂದು ದಾರಿಯ ಪಕ್ಕದ ಪೀನಾಸಿ ಗಿಡದ ಮೇಲೆ ಕುಳಿತಿದ್ದ ಉಸರವಳ್ಳಿಯನ್ನು ನೋಡುತ್ತಾ ಅವರಲ್ಲೇ ಜೋರಾಗಿ ಚರ್ಚೆ ನಡೆಸುತ್ತಿದ್ದರು. ಇದ್ದಕ್ಕಿದ್ದಂತೆ ಹಸಿರು ಬಣ್ಣವು ಕಂದುಬಣ್ಣ ಆದಾಗ ಮಕ್ಕಳ್ಳೆಲ್ಲಾ ಬೆರಗಾಗಿ, ಬಿಟ್ಟ ಕಣ್ಣು ಬಿಟ್ಟಂತೆ, ಬಿಟ್ಟ ಬಾಯಿ ಬಿಟ್ಟಂತೆ ಬೆರಗಾಗಿ ನಿಂತಿದ್ದರು. ಅದೇ ದಾರಿಯಲ್ಲಿ ತೋಟದ ಕಡೆ ಹೊರಟಿದ್ದ ಗುರಪ್ಪನೂ “ ಏನ್ ಮಕ್ಕಳಾ. . ಏನೋ ಮಾಡತಿದಿರಾ ಅಂದ. ಬೇಲಿಯ ಮೇಲೆ ಇದ್ದ ಗೋಸುಂಬೆಯನ್ನು ಕಂಡು. “ಲೋ ಹೋಗ್ರೋ ಹೋಗ್ರೊ. . ಅದು ಊಸರವಳ್ಳಿ! ಅದು ಉಸಿರು ಬಿಟ್ರೆ ಕೈಕಾಲುಗಳೆಲ್ಲಾ ಕೊಳೆತೊತ್ತೈತೇ ಎಂದು ಮಕ್ಕಳಿಗೆಲ್ಲಾ ದಿಗಲಿಕ್ಕಿಸಿ ನಡಿರೀ ನಡಿರೀ ನೋಡಿದ್ದು ಸಾಕು ಅಂತ ಬೈದು, ಗುಂಪನ್ನು ಚದುರಿಸಿ ಎಲ್ಲರನ್ನೂ ಶಾಲೆಯ ದಿಕ್ಕಿಗೆ ಓಡಿಸುವಷ್ಟರಲ್ಲಿ ಚಿಗುರೆಲೆಯಂತೆ ಹಸಿರಾಗಿದ್ದ ಆ ಗೂಸುಂಬೆ ಕಪ್ಪು ಬಣ್ಣವನ್ನು ತಳೆದು ಪಕ್ಕದಲ್ಲಿದ್ದ ಹೊಂಗೆಯ ಮರೆಕ್ಕೆ ಏರುತ್ತಿತ್ತು.




ಇದು ಇಲ್ಲೇ ಇದ್ದರೆ ರಸ್ತೆಯಲ್ಲಿ ಚಲಿಸುವ ನೂರಾರು ಲಾರಿಗಳಿಂದ ಇದಕ್ಕೆ ಉಳಿಗಾಲವಿಲ್ಲ ಎಂದು ನನಗೆ ಚೆನ್ನಾಗಿ ಮನವರಿಕೆಯಾಗಿರೊದರಿಂದ ಅದನ್ನು ಸೇಫಾಗಿ ರೆಸ್ಕ್ಯೂ ಮಾಡಿ ಅಲ್ಲೇ ಪಕ್ಕದಲ್ಲಿದ್ದ ಕಾಡಿಗೆ ಕೊಂಡೋಗಿ ಬಿಟ್ಟು ಬಂದೆ.

ಹಲ್ಲಿಯ ಜಾತಿಗೆ ಸೇರಿವ ಗೋಸುಂಬೆಯು ಅಪ್ಪಟ ಮಾಂಸಹಾರಿ ಎನ್ನುವುದಕ್ಕಿಂತ ಕೀಟಹಾರಿ ಎನ್ನಬಹುದು. ಸೊಯ್ಯನೆ ಹಾರುವ ಏರೊಪ್ಲೇನ್ ಚಿಟ್ಟೆ, ದೂರದಲ್ಲಿ ಕುಳಿತಿರುವ ಮಿಡತೆ, ಚಿಟ್ಟೆ, ದುಂಬಿ, ಇತರೆ ಕೀಟಗಳಿಗೆ ಹೊಂಚಾಕಿ ಕಾದು ತನ್ನ ವಿಶೇಷ ವಿನ್ಯಾಸಿತ ಸುರಳಿಕಾರದ ಉದ್ದವಾದ ನಾಲಿಗೆಯನ್ನು ಚಂಗನೆ ಚಾಚಿ ಬೇಟೆಗಳನ್ನು ನಾಲಿಗೆಯಿಂದಲೇ ಹಿಡಿದು ನುಂಗುತ್ತದೆ.

ಗೋಸುಂಬೆ ಬಹಳ ನಿಧಾನವಾಗಿ ಚಲಿಸುವ ಸರಿಸೃಪ. ಸಾದಾರಣವಾಗಿ ಮರಗಿಡಗಳ ಮೇಲೆಯೇ ವಾಸಿಸುವ ಮರವಾಸಿ. ಆಗೊಮ್ಮೆ ಈಗೊಮ್ಮೆ ನೆಲದ ಮೇಲೆ ಬರುತ್ತದಾದರೂ; ಬೇರೆ ಜಾತಿಯ ಹಲ್ಲಿಗಳಂತೆ ವೇಗವಾಗಿ ಬಂಡೆಯ ಬೊಕರೆಗಳಿಗೆ ನುಸುಳಿ ತನ್ನ ವೈರಿಗಳಾದ ಹಾವು, ಹದ್ದು, ಗೂಬೆಗಳಿಂದ ತಪ್ಪಿಸಿಕೊಳ್ಳಲು ಇದಕ್ಕೆ ಸಾಧ್ಯವಿಲ್ಲ. ಇವೆಲ್ಲವುಗಳಿಂದ ತಪ್ಪಿಸಿಕೊಳ್ಳಲು ಗೋಸುಂಬೆಗಳು ಒಂದು ವಿಶೇಷ ಲಕ್ಷಣಗಳನ್ನು ಹೊಂದಿವೆ. ಅದೇನೆಂದರೆ ಬೇಕೆಂದಾಗ ತನ್ನ ಮೈ ಬಣ್ಣವನ್ನು ಬದಲಿಸುವುದು ಇದಕ್ಕೆ ಆಂಗ್ಲ ಭಾಷೆಯಲ್ಲಿ "Camouflage" ಎನ್ನುತ್ತಾರೆ. ತಾನು ಇರುವ ಆವಸಕ್ಕೆ ತಕ್ಕಂತೆ ತನ್ನ ಮೈ ಬಣ್ಣವನ್ನು ಬದಲಿಸುವ, ಮರೆಮಾಚುವ ಗುಣದಲ್ಲಿ ಮಹಾ ಪಾರಂಗತನಾದರೂ ಇತ್ತೀಚೆಗೆ ಇವುಗಳ ಸಂಖ್ಯೆ ತೀರಾ ಕಡಿಮೆಯಾಗುತ್ತಿರುವುದು ನೋವಿನ ಸಂಗತಿ.

ಮಿಲಿಯಂತರ ವರ್ಷದಿಂದ ಜೀವವಿಕಾಸದಲ್ಲಿ ಬದುಕುಳಿಯಲು ತನ್ನ ದೇಹದಲ್ಲಿ ಹಲವು ಬದಲಾವಣೆಗಳನ್ನು ಮಾಡಿಕೊಂಡು ಯಶಸ್ವಿಯಾಗಿ



ಬದುಕುತ್ತಿರುವ ಪ್ರಾಣಿಗೆ ಗೋಸುಂಬೆ ಒಂದು ಉತ್ತಮ ಉದಾಹರಣೆ. ಇದು ತನ್ನ ಕಾಲುಗಳನ್ನ ಮರಗಿಡಗಳ ಮೇಲೆ ಓಡಾಡಲು ವಿಶೇಷವಾಗಿ ಮಾರ್ಪಡಿಸಿಕೊಂಡಿದೆ, ಪ್ರತಿ ಪಾದವು ಐದು ಬೆರಳಿಂದ ಕೂಡಿದ್ದು, ನಮ್ಮ ಕೈ ಬೆರಳುಗಳಂತೆ ಎರಡು ಗುತ್ತಿಗಳಂತೆ ಇರುವುದರಿಂದ  ಮರದ ರೆಂಬೆಗಳನ್ನ ಹಿಡಿದುಕೊಳ್ಳಲು ಸಹಾಯ ಮಾಡುತ್ತವೆ. ಬಾಲ ಉದ್ದವಾಗಿದ್ದು ಸುರುಳಿಯಂತೆ ಸುತ್ತಿರುತ್ತದೆ ಇದು ರೆಂಬೆಯಿಂದ ರೆಂಬೆಗೆ ನಡೆಯುವಾಗ  ರೆಂಬೆಗೆ ಸುತ್ತಿಕೊಂಡು ಕೆಳಗೆ ಬೀಳದಂತೆ  ಹಿಡಿದುಕೊಳ್ಳಲು ಸಹಾಯ ಮಾಡುತ್ತದೆ.


ಸರಿಸೃಪಗಳಲ್ಲೇ ಅತಿ ಸೂಕ್ಷ್ಮವಾದ ಕಣ್ಣುಳ್ಳ ಗೋಸುಂಬೆಯ ಇನ್ನೊಂದು  ವಿಶೇಷವೆಂದರೆ ಅದರ ಕಣ್ಣಿನ ಎರಡು ರೆಪ್ಪೆಗಳು ಕೂಡಿಕೊಂಡಿದ್ದು ತನ್ನ ಎರಡು ಕಣ್ಣುಗಳು ಏಕಕಾಲದಲ್ಲಿ ಎರಡು ಬೇರೆ ಬೇರೆ ವಸ್ತುಗಳನ್ನು ನೋಡಬಹುದಗಿದೆ. 5-10 ಮೀಟರ್ ದೂರದಲ್ಲಿರುವ ಸಣ್ಣ ಕೀಟಗಳನ್ನು  ಸಹ ಕ್ಷಣಾರ್ಧದಲ್ಲಿ ಗುರುತಿಸುತ್ತವೆ . ಸ್ವತಂತ್ರವಾಗಿ ಎಲ್ಲಾ ಕಡೆ ತಿರುಗಿಸಲು ಬರುವ ಎರಡೂ ಕಣ್ಣುಗಳಿಂದ ತನ್ನ ದೇಹದ ಸುತ್ತಲಿನ 360 ಡಿಗ್ರಿ ಕೋನದ ಸಂಪೂರ್ಣ ಚಿತ್ರಣವನ್ನು ನೋಡಬಹುದಾಗಿದೆ.

ಗೋಸುಂಬೆಯು ತನ್ನ ನಾಲಿಗೆಯನ್ನು ತನ್ನ ದೇಹದ ಉದ್ದಕ್ಕಿಂತಲೂ ಹೆಚ್ಚು ಉದ್ದವಾಗಿ 30,000/ Sec ವೇಗದಲ್ಲಿ ಚಾಚಬಲ್ಲದು. ಇದರ ನಾಲಿಗೆ ಮೂಳೆ ಹಾಗೂ ಮಾಂಸದಿಂದ ಮಾಡಲ್ಪಟ್ಟ ಒಂದು ಸಂಕೀರ್ಣ ಅಂಗವಾಗಿದೆ. ಬಾಯಿಯಲ್ಲಿ ಸುರುಳಿ ಸುತ್ತಿದ್ದ ನಾಲಿಗೆಯನ್ನು ಒಮ್ಮೆಲೆ ದೂರದಲ್ಲಿರುವ ಕೀಟಕ್ಕೆ ಬಡಿಯುತ್ತದೆ. ನಾಲಿಗೆ ತುದಿಯಲ್ಲಿನ ಅಂಟು ಕೀಟವನ್ನು ಅಂಟಿಕೊಂಡು ಕೀಟ ನಾಲಿಗೆಗೆ ಸಿಕ್ಕಿಕೊಳ್ಳುತ್ತದೆ. ನಂತರ ನಿಧಾನವಾಗಿ ನಾಲಿಗೆಯನ್ನು  ಬಾಯಿಯ ಒಳಗೆ ಎಳೆದುಕೊಂಡು ಕೀಟವನ್ನು ಗುಳುಂ ಮಾಡುತ್ತದೆ. ಬಹಳ ವೇಗವಾಗಿ ಹಾರುವ ಏರೋಪ್ಲೇನ್ ಚಿಟ್ಟೆಗಳನ್ನೇ ಹೊಂಚುಹಾಕಿ ಹಿಡಿಯಬಲ್ಲದ್ದಾಗಿದೆ.!

ಗೋಸುಂಬೆ ಸಾಮಾನ್ಯವಾಗಿ ಮೊಟ್ಟೆ ಇಟ್ಟು ಮರಿಮಾಡುತ್ತದೆ. ಹೆಣ್ಣು ಗೋಸುಂಬೆ ಮೊಟ್ಟೆ ಇಡುವ ಕಾಲದಲ್ಲಿ  ನೆಲದ ಮೇಲೆ ಬಂದು ಭೂಮಿಯಲ್ಲಿ ಸುಮಾರು 20 ಸೆಂಟಿಮೀಟರ್ ಆಳದ ಗುಂಡಿಯನ್ನು ತೋಡಿ ಅದರಲ್ಲಿ ಸುಮಾರು ಎರಡರಿಂದ ನಾಲ್ಕು ಮೊಟ್ಟೆಗಳಿಟ್ಟು, ಕೆಲವು ಪ್ರಭೇದಗಳು 80-100 ಮೊಟ್ಟೆಗಳನ್ನು ಇಡುತ್ತವೆ. ಮೊಟ್ಟೆ ಯಿಂದ ಮರಿ ಹೊರಬರಲು ಸುಮಾರು 6-7 ತಿಂಗಳು ತೆಗೆದು ಕೊಳ್ಳುತ್ತದೆ.



ಹೀಗೆ ಹಲವಾರು ವಿಶೇಷತೆಗಳಿಂದ ಕೂಡಿದ ವಿಷವಿಲ್ಲದ ಈ ಮುಗ್ಧ ಪ್ರಾಣಿಯನ್ನು ಅದರ ನಿಧಾನ ಗತಿಯ ನಡೆಗೋ,  ಬಣ್ಣ ಬದಲಿಕೆಗೋ ಹೆದರಿದ  ಜನರು ಯಾವುದೋ ವಿಚಿತ್ರಪ್ರಾಣಿ ಎಂದೂ ಅದನ್ನ ಕೊಲ್ಲತ್ತಿದ್ದಾರೆ. ಹೆಚ್ಚುತ್ತಿರುವ ಮಾಲಿನ್ಯ ಹಾಗೂ ಕಾಡಿನ ನಾಶದಿಂದ ಹಲವು ಜಾತಿಯ ಗೋಸುಂಬೆಗಳು ಅವನತಿಯ ಅಂಚನ್ನು ತಲುಪುತ್ತಿವೆ. ನೂರು ಮಿಲಿಯನ್ ವರ್ಷದಿಂದ ಯಶಸ್ವಿಯಾಗಿ ಬದುಕಿ ಬಂದಿರುವ ಈ ಗೋಸುಂಬೆಯ ವಂಶವನ್ನು ಸಂರಕ್ಷಿಸುವ ಹಾದಿಯಲ್ಲಿ ಹಲವಾರು ಜನ ಕಾರ್ಯನಿರತರಾಗಿದ್ದಾರೆ, ನಾವು ಕೂಡ ಎಚ್ಚೆತ್ತು ಅವುಗಳನ್ನು ಕೊಲ್ಲದೆ ಬದುಕಲು ಬಿಟ್ಟು ಸಂರಕ್ಷಣೆಯ ಹಾದಿಯಲ್ಲಿ ಸಾಗೋಣ.



# ವಿದ್ಯಾರ್ಥಿಗಾಗಿ ವಿಜ್ಞಾನ

## * ಕಲ್ಲರಳಿ ಹೂವಾಗಿ

ಸಸ್ಯದ ಬೀಜವೊಂದನ್ನು ಫ್ರೀಜರ್ ನಲ್ಲಿ ಇಟ್ಟು ಮರೆತುಬಿಡೋಣ. 30000 ವರ್ಷದ ನಂತರ ಆ ಬೀಜವನ್ನು ತೆಗೆದು ನೆಟ್ಟರೆ ಅದು ಮೊಳೆತು ದೊಡ್ಡದಾಗಿ ಹೂ ಬಿಡುವುದು ಎಂದು ನಿಮಗೆ ಅನಿಸುತ್ತದೆಯೇ?



ಆಶ್ಚರ್ಯಕರ ರೀತಿಯಲ್ಲಿ ವಿಜ್ಞಾನಿಗಳು ಇದೇ ರೀತಿ ಪ್ರಯೋಗ ಮಾಡಿ ಸಫಲರಾಗಿದ್ದಾರೆ. ಸೈಬೀರಿಯಾದ ಹಿಮದಲ್ಲಿ ಹಣ್ಣೊಂದು ಸಿಕ್ಕಿತು. ಇದನ್ನು ಮಮೂತ್ ಆನೆಗೆ ಹೋಲಿಸಿದರೆ ಪಳೆಯುಳಿಕೆ ಎಂದೇ ಹೇಳಬಹುದು. ಈ ಹಣ್ಣಿನ ಉಗಮ ಸುಮಾರು 31800 ವರ್ಷ ಎಂದು ಅಂದಾಜು ಮಾಡಿದ್ದಾರೆ. ಹಣ್ಣಿನ ತುಂಡುಗಳಿಂದ ಲ್ಯಾಬ್ ನಲ್ಲಿ ವಿಜ್ಞಾನಿಗಳ ತಂಡ ಈ ಸಸ್ಯವನ್ನು ಬೆಳೆಸುವಲ್ಲಿ ಸಫಲರಾಗಿದ್ದಾರೆ. ಈಗ ಆ ಸಸ್ಯ ಬಿಳಿ ದಳದ ಹೂಗಳನ್ನು ಬಿಟ್ಟಿದೆ. ಈಗ ಸದ್ಯ ಇರುವ ಅತ್ಯಂತ ಹಳೆಯ ಹೂ ಬಿಡುವ ಸಸ್ಯ ಇದಾಗಿದೆ.

ಹಿಂದೆ ಮಮೂತ್ ಆನೆಗಳು ಇಲ್ಲಿ ತಿರುಗಾಡುತ್ತಿದ್ದಾಗ ಆರ್ಕ್ಟಿಕ್ ಅಳಿಲೊಂದು ಬೀಜ ಮತ್ತು ಹಣ್ಣುಗಳನ್ನು ನೆಲದಲ್ಲಿ ಹೂತಿಟ್ಟ ಮೇಲೆ, ಅದು ಪರ್ಮಾಫ್ರಾಸ್ಟ್ ಆಯಿತು. ಇತ್ತೀಚೆಗಷ್ಟೇ ವಿಜ್ಞಾನಿಗಳು 38 ಮೀಟರ್ ಆಳದಿಂದ ಆ ಹಣ್ಣನ್ನು ತೆಗೆದು ಲ್ಯಾಬಿನಲ್ಲಿ ಪೋಷಣೆ ಮಾಡಿದ್ದಾರೆ. ಮೊಳಕೆಯೊಡೆದ ಮೇಲೆ ಪಾಟಿಗೆ ಸ್ಥಳಾಂತರಿಸಿದ್ದಾರೆ. ಹೂವು ಕೂಡ ಅರಳಿದೆ. ಈಗ ಅದೇ ರೀತಿಯಿರುವ ಸಸ್ಯದೊಂದಿಗೆ ಹೋಲಿಸಿ ಜೀವವಿಕಾಸದ ಕುರುಹುಗಳನ್ನು ಅರಿಯಲು ಪ್ರಯತ್ನಿಸುತ್ತಿದ್ದಾರೆ. ನಮ್ಮ ಮುಂದಿನ ಪೀಳಿಗೆಗೆ ಇದೇ ರೀತಿ ಸಸ್ಯದ ಬೀಜಗಳನ್ನು ಶೈತ್ಯೀಕರಿಸಿ ಸಂರಕ್ಷಿಸುವ ಅಪರೂಪದ ವ್ಯವಸ್ಥೆ ನಾರ್ವೆ ದೇಶದಲ್ಲಿ ಮಾಡಿ ಈಗಾಗಲೇ ಲಕ್ಷಾಂತರ ಜಾತಿಯ ಬೀಜಗಳನ್ನು ಫ್ರೀಜ್ ಮಾಡಲಾಗಿದೆ. ಮುಂದೊಂದು ದಿನ ಯಾವುದಾದರೂ ಸಸ್ಯ ನಿರ್ನಾಮವಾದಲ್ಲಿ ಇಲ್ಲಿನ ಬೀಜಉಗ್ರಾಣಕೋಶದಿಂದ ಆ ಸಸ್ಯಕ್ಕೆ ಪುನರ್ಜೀವನ ಕಲ್ಪಿಸಬಹುದು.

# ಸಂಜೆ ಹೊತ್ತು

ಸಂಜೆ ಹೊತ್ತಲ್ಲಿ
ನೀಲಾಕಾಶದ ಛಾಯಾ. . .!
ಏಕಾಂತದಲ್ಲಿ  ಮನವ ಪುಳಕ
ಮಾಡಿದೆ ನೋಡು.. ನೋಡು..
ನಿನಗಾಗಿಯೇ ನೇಸರನು ಬಿಡಿಸ್ಯಾನು ಚಿತ್ತಾರ

ನದಿ ತೀರದ ಹಂಚಿನಲ್ಲಿ. . .!
ಹಕ್ಕಿಗಳ ಕಲರವ. . .!
ಜುಳುಜುಳು ನಾದವು ಮನ ಮೋಹಕ
ಓ . ತಂಗಾಳಿಯೇ. . .
ದೂರವಾಗಿಸು ಈ ನನ್ನ ನೋವ. . .!


ದುಂಬಿಯೊಂದು ಹೂವಿನಲ್ಲಿ
ಹೂವಿಗಲ್ಲಿ  ಕೇಸರದ ಜಳಕ. . .!
ರಸಹೀರಿ  ಹಾರಿಹೊಯ್ತು ಹೂವಿಗೀಗ ಪುಳಕ
ದಾರಿ ತೋರದಾಗ ಮನ ಮೌನ
ದಾರಿ ಕಾಣುವಾಗ ಮನ  ಚಂಚಲ.

ವ್ಯಂಗ್ಯ ಚಿತ್ರ. . .! ನೆರಳಿನಲ್ಲಿ. . .
ಅಣಕಿಸುತ್ತಿದೆ ನನ್ನ ರೂಪಕ
ದೂರದ ಗಿರಿಯ ಮೇಲೇರಿ
ಕೂಗುತಾನಾ ನೋಡು.. ನೋಡು..
ಕೆಂಪನಾ ಹುಸಿ ಕೊಪದಲಿ
ಚಂದಿರ ಬಂದ ನಗುಮುಖದಿ.


- ಕೃಷ್ಣನಾಯಕ್

ವನ್ಯಜೀವಿಗಳ ಬಗ್ಗೆ ಪ್ರೀತಿಯಿರುವ ಇವರು
ಮಹದೇಶ್ವರ ರಕ್ಷಿತ ಅರಣ್ಯದ ಬಳಿ ಕೃ ಷಿ ಜೊತೆಗೆ
ಸಾಹಿತ್ಯ ಕೃಷಿಯಲ್ಲಿ ತೊಡಗಿರುವ
ವಿಜ್ಞಾನ ಪದವೀಧರರು- +91  9611428901




© W C G